**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ. ಮಂಗಳೂರು,**
**ಕಾರ್ಯನಿರ್ವಹಣೆ ಪುತ್ತೂರು, ದ.ಕ.**

ಎಸ್.ಸಿ.ಸಂ. **5017/2018**

**ಚಾ.ಸಾ.ಃ 3** **ಪ್ರಾ.ಸಾ.ಃ 4**

ದಿನಾಂಕಃ **12-08-2022** ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರುಃ ಭರತೇಶ್ ರೈ

ತಂದೆಯ ಹೆಸರುಃ ಅನಂತ ರೈ

ವಯಸ್ಸು ಃ 37 ವರ್ಷ

ಉದ್ಯೋಗ ಃ ಕಾಂಟ್ರಾಕ್ಟ್

ವಾಸಸ್ಥಳ ಃ ಮೂಡಾಯೂರು, ಪಡುವನ್ನೂರು, ಪುತ್ತೂರು ತಾಲೂಕು.

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ-**

1. ನನಗೆ ಪ್ರಾ.ಸಾ.2 ಫಿರ್ಯಾದಿ ಗೊತ್ತು. ಪ್ರಾ.ಸಾ.2 ನಮ್ಮ ಪಕ್ಕದ ಮನೆಯ ವಾಸಿ. ನನಗೆ 1 ಮತ್ತು 2ನೇ ಆರೋಪಿಗಳು ಗೊತ್ತು.

2. 1ನೇ ಆರೋಪಿ ವಿನೋದ್ ಆಳ್ವ ಮತ್ತು ನಮ್ಮ ನಡುವೆ ಒಂದು ಜಾಗಕ್ಕೆ ಸಂಬಂಧಿಸಿ ಸಿವಿಲ್ ವ್ಯಾಜ್ಯ ಸುಮಾರು ವರ್ಷಗಳಿಂದ ಇರುತ್ತದೆ. ನಾನು 4ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ 1ನೇ ಆರೋಪಿ ವಿನೋದ್ ಆಳ್ವ ನನ್ನ ತಂದೆಯವರ ಮೇಲೆ ದಾಳಿ ನಡೆಸಿದ್ದರು. ಸದರಿ ಹಲ್ಲೆಗೆ ಸಂಬಂಧಿಸಿ 1ನೇ ಆರೋಪಿಯ ಮೇಲೆ ಒಂದು ಪ್ರಕರಣ ದಾಖಲಾಗಿತ್ತು ಮತ್ತು ಸದರಿ ಪ್ರಕರಣವು ಈಗ ಮುಗಿದಿರುತ್ತದೆ. ಕ್ರಿಮಿನಲ್ ಪ್ರಕರಣ ಮುಗಿದರೂ ಸಹ ನಮ್ಮ ಮತ್ತು 1ನೇ ಆರೋಪಿಯ ನಡುವೆ ಸಿವಿಲ್ ವ್ಯಾಜ್ಯ ಮುಂದುವರೆದಿತ್ತು. ನಮ್ಮ ಮತ್ತು ಆರೋಪಿಯ ನಡುವೆ ವೈಷಮ್ಯ ಮುಂದುವರೆದಿರುತ್ತದೆ.

3. ದಿನಾಂಕಃ 11.11.2015 ರಂದು 1ನೇ ಆರೋಪಿಯ ಮನೆಗೆ ಕೆಲಸಕ್ಕೆ ಬಂದಿದ್ದ ಚಾ.ಸಾ.5 ರವಿ ಎನ್ನುವವರು ನನ್ನ ಮನೆಗೆ ಸಂಜೆ ಸಮಯ ಬಂದು ನನ್ನನ್ನು "ಇಲ್ಲಿ ಭರತ್ ರೈ ಯಾರು?" ಎಂದು ಪ್ರಶ್ನಿಸಿರುತ್ತಾರೆ. ಅದಕ್ಕೆ ನಾನು ನಾನೇ ಭರತ್ ರೈ ಎಂದು ಹೇಳಿರುತ್ತೇನೆ. ಆಗ ಚಾ.ಸಾ.5ರವರು

ನನ್ನನ್ನು ಕುರಿತು "1ನೇ ಆರೋಪಿಯು ನಿಮ್ಮ ಬೈಕ್ ಮೇಲೆ ತನ್ನ ಬಾಬ್ತು ಜೀಪನ್ನು ಹತ್ತಿಸಿ ಕೊಲ್ಲಲು ಸಂಚು ರೂಪಿಸಿರುತ್ತಾರೆ. ಸದರಿ ಸಂಚನ್ನು ಟಿಪ್ಪು ಸುಲ್ತಾನ್ ಗಲಾಟೆಯಿಂದ ಆಗಿರುತ್ತದೆ ಎಂದು ರೂಪಿಸಲು ಸಂಚು ನಡೆಸಿರುತ್ತಾರೆ." ಎಂದು ನನಗೆ ಚಾ.ಸಾ.5 ಹೇಳಿರುತ್ತಾರೆ.

4. ಚಾ.ಸಾ.5ರವರಿಂದ ಮಾಹಿತಿ ದೊರೆತ 5 ದಿನಗಳ ನಂತರ ಪ್ರಾ.ಸಾ.2ರವರು ಹಾಲನ್ನು ಈಶ್ವರಮಂಗಲಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ 1ನೇ ಆರೋಪಿ ಮತ್ತು 2ನೇ ಆರೋಪಿತರು ಜೀಪನ್ನು ತಾಗಿಸಿ ಪ್ರಾ.ಸಾ.2 ಸಚ್ಚಿದಾನಂದರವರನ್ನು ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ. ಪ್ರಾ.ಸಾ.2 ಸಚ್ಚಿದಾನಂದ ಈ ಪೂರ್ವದಲ್ಲಿ 1ನೇ ಆರೋಪಿಯ ಬಳಿ ಕೆಲಸಕ್ಕೆ ಇದ್ದು, 1ನೇ ಆರೋಪಿಯೊಂದಿಗೆ ವೈಮನಸ್ಸುಗೊಂಡು ಕೆಲಸ ಬಿಟ್ಟು ಬಂದಿರುತ್ತಾನೆ, ಆ ಕಾರಣಕ್ಕಾಗಿ ಪ್ರಾ.ಸಾ.2ರವರನ್ನು ಮೇಲ್ಕಂಡಂತೆ 1ನೇ ಆರೋಪಿಯು ಕೊಲ್ಲಲು ಪ್ರಯತ್ನಿಸಿರುತ್ತಾರೆ. ಈ ಬಗ್ಗೆ ನನ್ನನ್ನು ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ-

**5.** ನಿ.ಡಿ.**1**ರಂತೆ ನನ್ನ ತಂದೆಯು **1**ನೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ನೋಂದಾಯಿಸಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಪ್ರಾ.ಸಾ.**2**ರವರು **1**ನೇ ಆರೋಪಿಯ ಬಳಿ ಕೆಲಸ ಬಿಟ್ಟ ನಂತರ ನನ್ನೊಂದಿಗೆ ಅನ್ಯೋನ್ಯವಾಗಿದ್ದರು. ನನಗೆ ಚಾ.ಸಾ.**5** ರವರಿಂದ ಮಾಹಿತಿ ದೊರೆತ ನಂತರವೂ ಸಹ ಸದರಿ ಮಾಹಿತಿಯನ್ನು ನಾನು ಪ್ರಾ.ಸಾ.**2**ರವರೊಂದಿಗೆ ಹಂಚಿಕೊಂಡಿರುವುದಿಲ್ಲ. ಸದರಿ ಮಾಹಿತಿಯನ್ನು ನಾನು ಪ್ರಾ.ಸಾ.**2**ರವರೊಂದಿಗೆ ಹಂಚಿಕೊಳ್ಳಲು ಅವಕಾಶ ಇತ್ತು, ಆದರೆ ನಾನು ಹಂಚಿಕೊಂಡಿರಲಿಲ್ಲ. **1**ನೇ ಆರೋಪಿಯು ತನ್ನ ಜೀಪನ್ನು ಪ್ರಾ.ಸಾ.**2**ರವರಿಗೆ ತಾಗಿಸಿದ ಮಾಹಿತಿಯು ಘಟನೆ ನಡೆದ ದಿನದ ಮಧ್ಯಾಹ್ನ ಪೊಲೀಸರಿಂದ ನನಗೆ ಮಾಹಿತಿ ಸಿಕ್ಕಿರುತ್ತದೆ. ಘಟನೆಯ ಬಗ್ಗೆ ನಾನು ಮತ್ತು ಪ್ರಾ.ಸಾ.**2**ರವರು ಮಾತನಾಡಿಕೊಂಡಿರುವುದಿಲ್ಲ. ಪ್ರಾ.ಸಾ.**2**ರವರಿಗೆ ಘಟನೆಯಿಂದ ಗಾಯ ಆಗಿರುತ್ತದೆಯೋ ಇಲ್ಲವೋ ನಾನು ತಿಳಿದುಕೊಂಡಿರುವುದಿಲ್ಲ.

**6.** ಚಾ.ಸಾ.**5**ರವರು ನನಗೆ ಮಾಹಿತಿ ನೀಡಿದಾಗ ನನ್ನ ತಂದೆ-ತಾಯಿ ನನ್ನ ಜೊತೆ ಇದ್ದರು. ಸದರಿ ಮಾಹಿತಿಯ ಬಗ್ಗೆ ನಾನು ನನ್ನ ತಂದೆ-ತಾಯಿಯೊಂದಿಗೆ ಮಾತನಾಡಿರುವುದಿಲ್ಲ. ಚಾ.ಸಾ.**5**ರವರಿಂದ ಮಾಹಿತಿ ಬಂದ ನಂತರ ನಾನು ಪೊಲೀಸು ಠಾಣೆಯಲ್ಲಿ ದೂರು ದಾಖಲಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಸದರಿ ಮಾಹಿತಿಯನ್ನು ಮೌಖಿಕವಾಗಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

**7.** ನಮ್ಮ ಮತ್ತು **1**ನೇ ಆರೋಪಿಯ ನಡುವೆ ಗೇಣಿ ಹಕ್ಕಿಗೆ ಸಂಬಂಧಿಸಿ ಸಿವಿಲ್ ವ್ಯಾಜ್ಯವಿರುತ್ತದೆ. ನನಗೆ ಆರೋಪಿಯ ಮೇಲೆ ವೈಷಮ್ಯವಿದ್ದ ಕಾರಣ ಸುಳ್ಳು ಕೇಸು ದಾಖಲಿಸಲು ಹವಣಿಸುತ್ತಿದ್ದೆ ಎಂದರೆ ಸರಿಯಲ್ಲ.

**8.** ಪ್ರಾ.ಸಾ.**2**ರವರು **1**ನೇ ಆರೋಪಿಯು ನೋಡಿಕೊಳ್ಳುತ್ತಿದ್ದ ದೇವಸ್ಥಾನದ ಹುಂಡಿ ಕದ್ದಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ **1**ನೇ ಆರೋಪಿಯು ಪ್ರಾ.ಸಾ.**2**ರವರನ್ನು ಕೆಲಸದಿಂದ ಬಿಡಿಸಿದ್ದರು ಎಂದರೆ ಸರಿಯಲ್ಲ. ಪ್ರಾ.ಸಾ.**2**ರವರನ್ನು ಕೆಲಸದಿಂದ ಬಿಡಿಸಿದ ಸಂದರ್ಭವನ್ನು ನಾನು ನನ್ನ ಅನುಕೂಲವಾಗುವಂತೆ ಬಳಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯ ಕಾರಣಕ್ಕಾಗಿ **1**ನೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಾನು ಹೇಳಿದಂತಹ ಯಾವುದೇ ಘಟನೆಯೂ ನಡೆದಿಲ್ಲವಾದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.5ರವರು ನನ್ನ ಬಳಿ ಬಂದು ಯಾವುದೇ ಮಾಹಿತಿಯನ್ನು ನಮಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ ಹೇಳಿ, ಕೇಳಿ ಸರಿ ಇದೆ,**

**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ. ಮಂಗಳೂರು ಕಾರ್ಯನಿರ್ವಹಣೆ: ಪುತ್ತೂರು, ದ.ಕ.**